21

# ನಿನಗಿದು ಸಾಧ್ಯವಿದೆ

# (10:32-39)

10ನೇ ಅಧ್ಯಾಯದ ಅಂತ್ಯಭಾಗದಲ್ಲಿ, ತನ್ನ ಓದುಗರು ಹಿಂಜಾರಿ ಹೋಗಬಾರದೆಂಬ ಭರವಸವನ್ನು ತಿಳಿಸಲಾಗಿದೆ (ವಚನ 39) ಅವನ ಈ ನಿಶ್ಚಯತ್ವವನ್ನು ಅವರುಗಳು ಸಹ ಹಂಚಿಕೊಳ್ಳಬೇಕೆಂದು ಅವನು ಬಯಸಿದನು. ಅವರ ಕುರಿತು ಈ ನಿರ್ಣಯವನ್ನು ಅವನು ಏಕೆ ನೀಡಿದನು? ವಚನ 32 ರಿಂದ 39ರಲ್ಲಿ, ಇದಕ್ಕೆ ಕೆಲವು ಕಾರಣಗಳನ್ನು ನೀಡಲಾಗಿದೆ.

ಈ ಭಾಗವನ್ನು ಅಧ್ಯಯನ ಮಾಡುವಾಗ, ಒಂದು ಆಲೋಚನೆ ನನ್ನ ಮನಸ್ಸಿಗೆ ಬಂದಿತು: ಒಂದು ಮಹತ್ವದ ಪಂದ್ಯವನ್ನು[1] ಆಡಲು, ಒಬ್ಬ ತರಬೇತುದಾರನು ತರಬೇತಿ ನೀಡುತ್ತಿದ್ದನು. ಆ ಪಂದ್ಯವನ್ನು ಗೆಲ್ಲುವ ಬಗ್ಗೆ ಅವನು ಮಾತನಾಡಿ, "ಹೌದು ಅದು ನಿಮ್ಮಲ್ಲಿ ಸಾಧ್ಯವಿದೆ! ನೀವು ಈಗಾಗಲೇ ಅನೇಕ ಪಂದ್ಯಗಳನ್ನು ಗೆದ್ದಿರುವದರಿಂದ, ಪುನಃ ಅದನ್ನು ಗೆಲ್ಲುವಿರಿ" ಎಂದು ಹೇಳುವನಲ್ಲವೇ. ಗೆಲ್ಲುವ ವಿಚಾರದಲ್ಲಿ ಒಂದು ಸಾರಿ ಆಲೋಚಿಸಿರಿ. ನೀವು ಗೆಲ್ಲುವಿರಿ ಎಂದು ನಂಬಬೇಕಷ್ಟೆ! ಇದನ್ನು ನೀವು ನಂಬುವಿರಾ? ಆ ತಂಡವು ಒಕ್ಕೂರಲಿನಿಂದ ಹೌದು! ಹೌದು! ಹೌದು! ಎಂದು ಹೇಳುವದನ್ನು ನಾನು ಊಹಿಸುತ್ತೇನೆ.

ಪ್ರಸಂಗಿಯ ಎರಡು ವಿಧವಾದ ಹೊಣೆಗಾರಿಕೆಯನ್ನು ಹೊಂದಿರುವನು ಎಂದು ಕೇಳಲ್ಪಟ್ಟಿದ್ದೇವೆ: ವೇದನೆವುಳ್ಳವರನ್ನು ಸಂತೈಸಬೇಕು. ಸುಖವಾಗಿರುವವರಿಗೆ ವೇದನೆಯನ್ನು ಉಂಟುಮಾಡಬೇಕು. ಇಬ್ರಿಯ 10:26-31ರಲ್ಲಿ, "ಸುಖವಾಗಿರುವವರಿಗೆ ವೇದನೆಯನ್ನು ನೀಡು" ಎಂದಿದ್ದರೆ, ವಚನ 32ರಿಂದ 39ರಲ್ಲಿ, "ವೇದನೆವುಳ್ಳವರಿಗೆ ಸಂತೈಸು" ಎಂದಿದೆ. ತರಬೇತಿ ನೀಡುವವನಲ್ಲಿ ಇದನ್ನೆ ಗಮನಿಸುತ್ತೇವೆ, ಅದರಲ್ಲಿ ಸಕಲ ಪ್ರಾಮುಖ್ಯತೆಯನ್ನು ಗಮನಿಸುತ್ತೇವೆ: ಸಂಕಷ್ಟದಲ್ಲಿದ್ದ ಓದುಗರು ದೇವರ ಸಹಾಯವನ್ನು ಪಡೆಯುವರು. ಅವರು ಏಕೆ ನಂಬಿಗಸ್ತರಾಗಿರಬೇಕು, ಎಂಬ ವಿಷಯಕ್ಕೆ ನಾಲ್ಕು ಕಾರಣಗಳನ್ನು ನೋಡಲಿದ್ದೇವೆ. ನೀವು ನಂಬಿಗಸ್ತರಾಗಿರಬೇಕು ಎಂದು ಹೇಳಲಾಯಿತು.

## "ನೀವು ಚೆನ್ನಾಗಿ ಅರಿತುಕೊಂಡಿರುವದರಿಂದ" (10:32, 34)

ಈ ಪತ್ರಿಕೆಯನ್ನು ಸ್ವೀಕರಿಸಿದ ಕ್ರೈಸ್ತರು, ಒಂದು ಕಾಲದಲ್ಲಿ "ಜ್ಞಾನ ಪ್ರಕಾಶ" ದಲ್ಲಿ ಇದ್ದವರಾಗಿದ್ದರು (ವಚನ 32). "ಸುವಾರ್ತಾ ಪ್ರಭಾವವನ್ನು" ಹೊಂದಿದ್ದರು (2 ಕೊರಿಂಥ 4:4), ಅದು ಅವರ ಹೃದಯಗಳಲ್ಲಿ ಹೊಳೆದಿತ್ತು. ಅವರುಗಳು "ಉತ್ತಮವಾದ ಹಾಗೂ ಸ್ಥಿರ ವಾದ ಆಸ್ತಿಯನ್ನು" ಹೊಂದಿದ್ದರು (ಇಬ್ರಿಯ 10:34). ಈ ಸಂಬಂಧದವರು ಈ ಹಿಂದೆ ಉತ್ತೇಜನಗೊಂಡಂತೆ, ಅದರಲ್ಲಿಯೇ ಮುಂದುವರೆಯ ಬೇಕಿತ್ತು.

## "ನೀವು ಮಾಡಿದ ಕ್ರಿಯೆಗಳ *ನಿಮಿತ್ತವಾಗಿಯೇ*" (10:32-35)

ಇಬ್ರಿಯ ಓದುಗರು ಈ ವಿಷಯವನ್ನು ನೆನಪು ಮಾಡಬೇಕಿತ್ತು. ನೆನಪುಗಳು ಶಾಪವಾಗಿ ದ್ದರೂ, ಕೆಲವು ಬಾರಿ ಅವುಗಳು ಆಶೀರ್ವಾದವಾಗುತ್ತವೆ. ಅವರು ತಮ್ಮ ಕಷ್ಟದ ದಿನಗಳನ್ನು ನೆನಪು ಮಾಡಬೇಕಾಯಿತು (ವಚನಗಳು 32-34ಎ).[2] ಅವರುಗಳು ಉತ್ತಮವಾದದ್ದನ್ನು ಹೊಂದುವ ನಿರೀಕ್ಷೆಯಲ್ಲಿದದ್ದರಿಂದ ನಂಬಿಗಸ್ತರಾಗಿರಬೇಕಿತ್ತು (ವಚನ 34ಬಿ). ಅವುಗಳನ್ನು

ಅವರು ನಿರ್ಲಕ್ಷಮಾಡಬಾರದಿತ್ತು (ವಚನ 35). ಕಷ್ಟದ ಸಮಯದಲ್ಲಿ ಅವರು ತಾಳ್ಮೆವುಳ್ಳವರಾಗಿದ್ದರಿಂದ ಈಗ ನಂಬಿಕೆಯಲ್ಲಿ ಮುಂದುವರೆಯ ಬೇಕಿತ್ತು!

## "ನೀವು ಹೊಂದಿರುವ *ವಾಗ್ದಾನದ* ನಿಮಿತ್ತವಾಗಿ" (10:35, 36)

ವಚನ 35ರಲ್ಲಿ, ಮಹಾ ಪ್ರತಿಫಲದ ಕುರಿತು ಹೇಳಲಾಗಿದೆ. ವಚನ 36ರಲ್ಲಿ, ವಾಗ್ದಾನದ ಫಲವನ್ನು ಹೊಂದಲು ಅವರು ತಾಳ್ಮೆಯಿಂದ ಇರಬೇಕಿತ್ತು.

ಪಂದ್ಯದ ತರಬೇತುದಾರನ ಕುರಿತು ಈ ಮೊದಲು ನಾನು ನಿಮಗೆ ತಿಳಿಸಿದ್ದೆ. ವಚನ 36ನ್ನು ನಾನು ಓದುವಾಗ, ಪಂದ್ಯದ ತಂಡದವರು ಸೋಲುವ ಸಮಯದಲ್ಲಿ, "ಬಿಟ್ಟುಕೊಡಬೇಡಲಿ" ಎಂದು ಅವನು ಹೇಳುವನಲ್ಲವೇ. ಅದರಂತೆ ಬರಹಗಾರನು ತನ್ನ ಓದುಗರಿಗೆ "ತಾಳ್ಮೆ" ಇರಲಿ ಅಂದನು (ವಚನ 36). "ತಾಳ್ಮೆ" ಎಂಬ ಪದವನ್ನು ("ಯೂಪೋಮೋನೆ") ಎಂಬ ಜೋಡಿ ಪದದಿಂದ ಅನುವಾದ ಮಾಡಲಾಗಿದೆ ಅಂದರೆ "ಕಷ್ಟದಲ್ಲಿ ಸಹಿಸಿಕೊಳ್ಳುವದು" ಎಂಬ ಅರ್ಥ. ಒಬ್ಬನು ತನ್ನ ಬಾರವನ್ನು ಇಳಿಸುವ ಸಮಯದಲ್ಲಿ ಆ ಹೊಣೆಯಿಂದ ತಪ್ಪಿಸಿಕೊಳ್ಳದೆ ಇರುವದು. ಮೂಲ ಓದುಗರು (ಕ್ರೈಸ್ತರು) ತಮ್ಮ ಕ್ರೈಸ್ತತ್ವವನ್ನು ತೊರೆಯುವ ಸಮಯದಲ್ಲಿದ್ದರು. ಆದ್ದರಿಂದ ಕ್ರೈಸ್ತತ್ವವನ್ನು ನೀವು ತೊರೆಯದೆ ಸಮಯದಲ್ಲಿದದರು. ಆದ್ದರಿಂದ ಕ್ರೈಸ್ತತ್ವವನ್ನು ನೀವು ತೊರೆಯದೆ ಹೋದರೆ ನಿತ್ಯವಾದ ಬಹುಮಾನವನ್ನು ಹೊಂದುವಿರಿ ಎಂದು ಹೇಳಿದನು!

ತಾಳ್ಮೆಯಿಂದ ಕಾಯುವದು ಸಹಿಸುವಿಕೆಯಲ್ಲ, ದೇವರ ಚಿತ್ತವನ್ನು ನೆರವೇರಿಸುವದೇ ಆಗಿರುತ್ತದೆ. ಏನೇ ನಷ್ಟ ಬಂದರೂ ದೇವರ ಚಿತ್ತವನ್ನು ಮಾಡುವದೇ ಆಗಿರುತ್ತದೆ.

## "ನೀವು *ನಂಬಿರುವಂಥ* ವಿಷಯದ ನಿಮಿತ್ತವಾಗಿ" (10:37-39)

ಅಧ್ಯಾಯ 10ರ ಅಂತ್ಯ ಭಾಗದಲ್ಲಿ ಹಬಕ್ಕೂಕ 2:3, 4 ವಾಕ್ಯವನ್ನು ಉಲ್ಲೇಖಿಸಲಾಗಿದೆ. ಕ್ರಿಸ್ತನ ಬರೋಣವು ಹತ್ತಿರವಾಗಿದ್ದು (ಇಬ್ರಿಯ 10:37) ಮತ್ತು ಆತನ ಬರೋಣದ ವಾಗ್ದಾನವು ಸತ್ಯವೇ ಆಗಿತ್ತು. ನಂಬಿಗಸ್ತರು ಜೀವಿಸುವರು, ಆದರೆ ಹಿಂಜಾರಿದವರಲ್ಲಿ ಆತನು ಆನಂದಪಡುವವನಲ್ಲ (ವಚನ 38). ಈ ಸಮಯದಲ್ಲಿ ಅವನ ಓದುಗರು ಭರವಸೆಯಿಲ್ಲದೆ ಇದ್ದರು ಎಂದು ತೋರಿದನು. ಅವರು ನಂಬಿಗಸ್ಥರಾಗಿ ಮುಂದುವರೆಯುವರು ಎಂಬ ಆಶಾಭಾವದಿಂದ ಇದ್ದನು (ವಚನ 39)!

ನಮ್ಮ ಕುರಿತಾಗಿ ಯಾವ ಆಲೋಚನೆಯನ್ನು ಮಾಡಿದ್ದೇವೆ? ನಾವುಗಳು ನಂಬಿಗಸ್ಥರಾಗಿ ಇರಬೇಕೆಂದು ದೇವರು ನಮ್ಮನ್ನು ಉತ್ತೇಜಿಸುತ್ತಿದ್ದಾನೆ. ಆದ್ದರಿಂದ, ನಾವುಗಳು ದೇವರಿಗೆ ಸಮೀಪಸ್ಥರಾಗಿದ್ದರೆ ನಂಬಿಗಸ್ಥರಾಗಿರಲು ಸಾಧ್ಯವಿದೆ (ಇಬ್ರಿಯ 13:5, 6). ನಮ್ಮ ಪ್ರತಿಕ್ರಿಯೆಯು ಹೌದು! ಹೌದು! ಹೌದು! ಎಂದಿರಲಿ.

---

ಟಿಪ್ಪಣೆಗಳು

[1]ವಚನ 32ರಲ್ಲಿ, "ಘರ್ಷಣೆ" ಎಂಬ ಗ್ರೀಕ್ ಪದ ಬಳಸಲಾಗಿದೆ "ಸ್ಪರ್ದೆ" (W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 121). [2]12:4 ಹಿಂಸೆಯಾಗಿದ್ದರೂ, ರಕ್ತಸಾಕ್ಷಿಯಾಗುವ ಅನುಭವ ಆ ಕ್ರೈಸ್ತರಿಗಾಗಿರಲಿಲ್ಲ.